**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 820/2015**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ ಅಕಾಟಿ |
| ತಂದೆಯ ಹೆಸರು | : | ಜನಕರೆಡ್ಡಿ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಸಹಾಯಕ ಕಾರ್ಯಪಾಲಕ ಅಭಿಯಂತರರು, ಹುಬ್ಬಳ್ಳಿ |
| ವಾಸಸ್ಥಳ | : | ಬೆಳಗಾಂ. |

**ಸಾಕ್ಷಿಯನ್ನು ದಿನಾಂಕಃ 15.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2009 ರಿಂದ 2016 ರವರೆಗೆ ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ಅವಧಿಯಲ್ಲಿ ಚಾಸಾ–1ರವರು ನಮ್ಮ ಮೇಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಹುಲ್ಲಹಳ್ಳಿ ನೀರಾವರಿ ಇಲಾಖಾ ವ್ಯಾಪ್ತಿಗೆ ನುಗು ಮೇಲ್ದಂಡೆ, ಎಡದಂಡೆ ಮತ್ತು ಬಲದಂಡೆ ನಾಲೆ, ಕಬಿನಿ ಬಲದಂಡೆ ನಾಲೆ, ಹುಲ್ಲಹಳ್ಳಿ ನಾಲೆ ಮತ್ತು ರಾಂಪುರ ನಾಲೆಗಳು ನಮ್ಮ ಕಛೇರಿಯ ವ್ಯಾಪ್ತಿಯಲ್ಲಿದ್ದವು.

ಹಾಡ್ಯ ಗ್ರಾಮದ ವ್ಯಾಪ್ತಿಯ ನುಗು ಮೇಲ್ದಂಡೆ ನಾಲೆಯ ಸರಪಳಿ ಸಂಖ್ಯೆ 22 ಕಿ.ಮೀ.ಯಲ್ಲಿ ಆರೋಪಿಗಳು ಪರಿವೀಕ್ಷಣಾ ರಸ್ತೆಯನ್ನು ಒತ್ತುವರಿ ಮಾಡಿದ್ದರು. ಈ ಬಗ್ಗೆ ನಮ್ಮ ಕಛೇರಿಯಿಂದ ತಹಶೀಲ್ದಾರ್ ಕಛೇರಿಗೆ ಪತ್ರ ಬರೆದಿದ್ದು, ನಂತರ ತಹಶೀಲ್ದಾರ್ ಕಛೇರಿಯಿಂದ ಭೂಮಾಪನ ಇಲಾಖೆಗೆ ಕಳುಹಿಸಿದ ಪತ್ರದ ಆಧಾರದ ಮೇಲೆ ಭೂಮಾಪನ ಇಲಾಖೆಯವರು ದಿನಾಂಕ 30.05.2013 ರಂದು ಬಂದು ಒತ್ತುವರಿ ಮಾಡಿದ ಜಾಗವನ್ನು ಅಳತೆ ಮಾಡಿದಾಗ ಪರಿವೀಕ್ಷಣಾ ರಸ್ತೆಯನ್ನು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ.

**ಸಿ.ಡಬ್ಲೂ–2 / ಪಿ.ಡಬ್ಲೂ–2**

ನಂತರ ನಾವು ಹದ್ದುಬಸ್ತ್ ಕಲ್ಲನ್ನು ನೆಟ್ಟು, ನಮ್ಮ ನಾಲಾ ವ್ಯಾಪ್ತಿಗೆ ಬರುವ ವಿಸ್ತೀರ್ಣಕ್ಕೆ ಮಣ್ಣಿನ ಚರಂಡಿ ತೆಗೆಯಿಸಿರುತ್ತೇವೆ.

ದಿನಾಂಕ 30.01.2015 ರಂದು ನಾನು ಮತ್ತು ಚಾಸಾ–1 ರವರು ಸದರಿ ಜಾಗವನ್ನು ನೋಡಲು ಹೋಗಿದ್ದಾಗ ಆರೋಪಿಗಳು ಈ ಮೇಲೆ ಹೇಳಿದ ಜಾಗವನ್ನು ಒತ್ತುವರಿ ಮಾಡಿಕೊಂಡು ಹದ್ದುಬಸ್ತ್ ಕಲ್ಲನ್ನು ಕಿತ್ತುಹಾಕಿ ಹಾಕಿ ನಾವು ತೆಗೆಸಿದ್ದ ಚರಂಡಿಯನ್ನು ಮುಚ್ಚಿ, ಟೊಮೆಟೋ ಬೆಳೆದಿದ್ದರು. ನಾವು ಆರೋಪಿಗಳನ್ನು ತೆರವುಗೊಳಿಸಿ ಎಂದು ಕೇಳಿದಾಗ ತೆರವುಗೊಳಿಸುವುದಿಲ್ಲವೆಂದು ಹೇಳಿರುತ್ತಾರೆ. ನಂತರ ಚಾಸಾ–1 ರವರು ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 2 ರಿಂದ 4 ನೇ ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಬಿ.ಕೆ.ಆರ್. ವಕೀಲರು ಸಮಯ ಕೋರಿರುತ್ತಾರೆ, ಸಾಕ್ಷಿದಾರರು ಬೆಳಗಾಂ ನಿಂದ ಬಂದಿದ್ದು, ಸಮಯ ನೀಡಲು ಯಾವುದೇ ಸಕಾರಣವಿಲ್ಲದಿರುವುದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**